# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎಸ್.ಸಿ. ನಂ. 32/2023

ಪಿಡಬ್ಲ್ಯೂ: 02
ಸಿಡಬ್ಲ್ಯೂ: 02

<u>ದಿನಾಂಕ: **05-12-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

| | |
|---|---|
| ಸಾಕ್ಷಿದಾರರ ಹೆಸರು | : ಶುಭಮಂಗಳ |
| ತಂದೆಯ ಹೆಸರು | : ಕಾಶಿ |
| ವಯಸ್ಸು | : 23 ವರ್ಷ |
| ಉದ್ಯೋಗ | : ಮನೆಗೆಲಸ |
| ವಾಸ ಸ್ಥಳ | : ಚಿಕ್ಕಮಗಳೂರು |

<u>**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:**</u>

ಪ್ರಾಸಾ–**1** / ಸವಿತಾ ನನ್ನ ಅಮ್ಮ. ಚಾಸಾ–**7** / ರಂಗನಾಥ ನನ್ನ ಗಂಡ. ಚಾಸಾ–**8** / ಸವಿತಾ ಆರೋಪಿತ ತಂಗಿ. ಚಾಸಾ–**9** / ರೋಜಾ ಆರೋಪಿತನ ಸಂಬಂಧಿ. ಚಾಸಾ–**10** / ಲೋಕನಾಥನ್ ಕಾಟುಪಕ್ಕಂ ಮನೆಯ ಮಾಲೀಕರು. ಆರೋಪಿ ಗಾಳಿಪೂಜೆ ಗ್ರಾಮದವನು. ನನ್ನ ಮದುವೆ ಹೊಳಲ್ಕೆರೆಯ ರಂಗನಾಥ (ಚಾಸಾ–7) ಇವರೊಂದಿಗೆ ದಿನಾಂಕ **22–04–2021** ರಂದು ಕುಮಾರಗಿರಿ ದೇವಸ್ಥಾನದಲ್ಲಿ ನಡೆಯಿತು. ಮದುವೆಯಾದ ನಂತರ ನಾನು ಹೊಳಲ್ಕೆರೆಯಲ್ಲಿ ವಾಸವಾಗಿದ್ದೆ.

**2.** ದಿನಾಂಕ **25–06–2021** ರಂದು ನನ್ನ ಗಂಡ ತರಕಾರಿ ತರಲೆಂದು ಮಾರುಕಟ್ಟೆಗೆ ಹೋಗಿದ್ದ ಆಗ **4.30 – 5.00** ಗಂಟೆಯಾಗಿತ್ತು. ಇನ್ನೂ ಸ್ವಲ್ಪ ತರಕಾರಿ ಬೇಕಿದೆ ಎಂದು ನನ್ನ ಗಂಡನಿಗೆ ಹೇಳಲೆಂದು ನಾನು ಮಾರುಕಟ್ಟೆಯ ಕಡೆಗೆ ಹೋದೆ. ಅಲ್ಲಿ ಆರೋಪಿ ಹೊಳಲ್ಕೆರೆ ಬಸ್ ನಿಲ್ದಾಣದ ಹತ್ತಿರ ಬಂದಿದ್ದ. ಆತ ನನ್ನನ್ನು ನೋಡಿ ತನ್ನ ತಂಗಿಯ ಸ್ನೇಹಿತೆಯ ಹುಟ್ಟುಹಬ್ಬ ಇದೆ ಎಂದು ಹೇಳಿ ನನಗೆ ಆತನೊಂದಿಗೆ ಬರುವಂತೆ ಹೇಳಿದ. ಆತನ ತಂಗಿ ನನಗೆ ಪರಿಚಯವಿದ್ದ ಕಾರಣ ನಾನು ಆತನೊಂದಿಗೆ ಹೊರಟೆ. ಆತನಿಗೆ ನಿನ್ನ ತಂಗಿ ಎಲ್ಲಿ ಎಂದು ಕೇಳಿದೆ ಆಗ ಆತ ಹುಟುಹಬ್ಬ ಇದೆ ಕಾರಣ ಬರುವಂತೆ ನನಗೆ ಪದೇ ಪದೇ ಹೇಳಿದ. ಆಗ ನಾನು ನಿನ್ನ ತಂಗಿ ಬಂದಿಲ್ಲ ಎಂದು ಆತನಿಗೆ ಕೂಗಾಡಿದೆ, ಆಗ ಆತ ನಿನ್ನ ಮೇಲೆ ಇಷ್ಟಪಟ್ಟು ಕರೆದುಕೊಂಡು ಬಂದಿದ್ದೇನೆಂದು ಹೇಳಿದ. ಆತ ನನ್ನ ಕಾರಿನಲ್ಲಿ ಕರೆದುಕೊಂಡು ಹೋದ. ಮುಂದೆ ನಾನು ಬೆಂಗಳೂರಿಗೆ ಹೋಗುವವರೆಗೂ ಏನಾಯಿತು ಎಂದು ನನಗೆ ಗೊತ್ತಾಗಲಿಲ್ಲ. ಮುಂದೆ ನಾನು ಕೂಗಾಡಿದರೂ ಕೂಡಾ ಆತ ನನಗೆ ಬಿಡಲಿಲ್ಲ. ತಮಿಳುನಾಡಿಗೆ ಹೋದ ಮೇಲೆ ನನಗೆ ಗೊತ್ತಾಯಿತು. ಅಲ್ಲಿ ಆತನಿಗೆ ಯಾಕೆ ಹೀಗೆ ಮಾಡುತ್ತಿದ್ದೀಯಾ ಹುಟ್ಟುಹಬ್ಬ ಇಲ್ಲ ಏನೂ ಇಲ್ಲ ಎಂದು ಕೇಳಿದಾಗ ನಿನ್ನನ್ನು ಇಷ್ಟಪಟ್ಟು ಕರೆದುಕೊಂಡು ಬಂದಿದ್ದೇನೆಂದು ಹೇಳಿದ. ಆತ ನನ್ನನ್ನು ತಮಿಳುನಾಡಿನ ಕಾಟುಪಕ್ಕಂ ಎಂಬ ಊರಿಗೆ ಲೋಕನಾಥನ್ ಇವರ ಮನೆಗೆ

ಕರೆದುಕೊಂಡು ಹೋಗಿದ್ದ. ಆ ಮನೆಯಲ್ಲಿ ಒಂದು ಅಜ್ಜಿ ಹಾಗೂ ಓರ್ವ ಹೆಣ್ಣು ಮಗಳು ಇರುತ್ತಿದ್ದರು. ನನಗೆ ಕೇವಲ ದಿನಕ್ಕೆ ಒಂದು ಸಾರಿ ಮಾತ್ರ ಊಟ ಕೊಡುತ್ತಿದ್ದರು, ರಾತ್ರಿ ಊಟ ಕೊಡುತ್ತಿರಲಿಲ್ಲ. ರಾತ್ರಿ ಆರೋಪಿ ಕೆಟ್ಟದಾಗಿ ಅಸಭ್ಯವಾಗಿ ವರ್ತಿಸುತ್ತಿದ್ದ. ನನ್ನ ಬಟ್ಟೆಗಳನ್ನೆಲ್ಲಾ ಎಳೆದುಹಾಕಿ ದೈಹಿಕ ಸಂಭೋಗ ನನ್ನೊಂದಿಗೆ ಮಾಡುತ್ತಿದ್ದ. ನಾನು ಆತನಿಗೆ ಸಂಭೋಗ ಮಾಡಲು ಬಿಡದಿದ್ದಲ್ಲಿ ಬೀಡಿಯಿಂದ ನನ್ನ ಕಾಲನ್ನು ಸುಡುತ್ತಿದ್ದ, ಅಲ್ಲದೇ ನನ್ನ ಕೈಯನ್ನು ಪರಚುತ್ತಿದ್ದ. ಹೀಗೆ ತುಂಬಾ ದಿನದವರೆಗೆ ಆತ ನನ್ನೊದಿಗೆ ಸಂಭೋಗ ಮಾಡಿದ. ಆದ ಮೇಲೆ ನಾನು ನಮ್ಮ ತಂದೆ ತಾಯಿಯನ್ನು ನೋಡಬೇಕೆಂದು ಆತನಿಗೆ ಅಳುತ್ತಾ ಹೇಳಿದೆ. ಆದ್ದರಿಂದ ಆತ ನನ್ನನ್ನು ಕರೆದುಕೊಂಡು ಬಂದು ತಮಿಳುನಾಡಿನ ಒಂದು ಬಸ್ ನಿಲ್ದಾಣದಲ್ಲಿ ಬಿಟ್ಟು ಆತ ಮಾಡಿರುವುದನ್ನು ಯಾರಿಗೂ ಹೇಳಕೂಡದು ಎಂದು ನನಗೆ ಹೆದರಿಸಿದ. ನಾನು ಅಲ್ಲಿ ಇದ್ದಾಗ ಒಂದು ಹಸಿರು ಪೇಪರ್ ಹಾಗೂ ಒಂದು ಬಿಳಿ ಹಾಳೆ ಮೇಲೆ ಆತ ನನ್ನ ಸಹಿಯನ್ನು ಪಡೆದಿದ್ದ. ನನಗೆ ಮದುವೆ ಕಾಲಕ್ಕೆ ಕೊಟ್ಟಂತಹ ಚಿನ್ನದ ತಾಳಿ, ಕೊರಳ ಚೈನು, ಉಂಗುರ ಹಾಗೂ ಬೆಳ್ಳಿಯ ಕಾಲುಚೈನು, ಕಾಲುಂಗುರ ಅವುಗಳನ್ನು ಆರೋಪಿ ಕಿತ್ತುಕೊಂಡ.

**3.** ನಾನು ಹೊಳಲ್ಕೆರೆ ಮಾರುಕಟ್ಟೆಗೆ ಆ ದಿನ ಹೋಗುವಾಗ ನನ್ನ ಬ್ಯಾಗಿನಲ್ಲಿ ನನ್ನ ಆಧಾರ್ ಕಾರ್ಡ್, ಆಯುಷ್ಮಾನ್ ಕಾರ್ಡ್, ಜಾತಿ ಪ್ರಮಾಣಪತ್ರ, ಜನನ ಪ್ರಮಾಣಪತ್ರ, ನನ್ನ **10** ನೇ ತರಗತಿ ಅಂಕಪಟ್ಟಿ ಹಾಗೂ ರೂ.**10000/-** ಹಣ ಇದ್ದವು. ಅವುಗಳನ್ನು ಆರೋಪಿ ಬ್ಯಾಗ್ ಸಮೇತ ಕಿತ್ತುಕೊಂಡಿದ್ದಾನೆ. ಆರೋಪಿ ನನ್ನನ್ನು ತಮಿಳುನಾಡಿನಲ್ಲಿ ಬಸ್ಸಿಗೆ ಹತ್ತಿಸಿದ ನಂತರ ಅಲ್ಲಿಂದ ಬೆಂಗಳೂರಿಗೆ ಬಂದು ನಂತರ ಬೆಂಗಳೂರಿನಿಂದ ನಮ್ಮ ಊರಾದ ಗಾಳಿ ಪೂಜೆಗೆ ದಿನಾಂಕ **09-09-2021** ರಂದು ಬಂದೆ. ಮನೆಯಲ್ಲಿ ನಮ್ಮ ತಾಯಿ ಎಲ್ಲಿಗೆ ಹೋಗಿದ್ದೆ ಎಂದು ನನ್ನನ್ನು ಕೇಳಿದರು. ಹೆದರಿಕೊಂಡು ನಾನು ಆಕೆಗೆ ವಿಷಯವನ್ನು ಹೇಳಲಿಲ್ಲ. ತದ ನಂತರ ಆಕೆ ನನ್ನನ್ನು ಗಂಡನ ಮನೆಗೆ ಬಿಟ್ಟು ಬರುವುದಾಗಿ ಹೇಳಿದರು. ನನ್ನ ತಾಯಿ ಊಟವನ್ನೇ ಬಿಟ್ಟಳು. ಆ ನಂತರವೇ ನಾನು ಆಕೆಗೆ ನನ್ನನ್ನು ತಮಿಳುನಾಡಿಗೆ ಕರೆದುಕೊಂಡು ಹೋದ ವಿಷಯವನ್ನು ಅವಳಿಗೆ ಹೇಳಿದೆ. ಆ ನಂತರ ನಾನು ಮತ್ತು ಆಕೆ ಪೊಲೀಸ್ ಠಾಣೆಗೆ ಬಂದೆವು ಮತ್ತು ದಿನಾಂಕ **04-02-2022** ರಂದು ಸಂಜೆ **6.30 - 7.00** ಗಂಟೆಗೆ ದೂರನ್ನು ಕೊಟ್ಟೆವು.

**4.** ದೂರು ಕೊಟ್ಟ ಬಳಿಕ ಸುಮಾರು ಒಂದು ತಿಂಗಳ ನಂತರ ತಮಿಳುನಾಡಿಗೆ ಮಹಜರಿಗೆ ಹೋಗಿದ್ದು ಆಗಲೇ ನನಗೆ ಆ ಮನೆ ಲೋಕನಾಥನ್ ಇವರಿಗೆ ಸೇರಿದ್ದು ಮತ್ತು ಆ ಮನೆಯಲ್ಲಿ ಅಜ್ಜಿಯ ಜೊತೆಗೆ ಇದ್ದಂತಹ ಹೆಂಗಸಿನ ಹೆಸರು ರೋಜಾ ಎಂದು ಗೊತ್ತಾಯಿತು. ನಾನು

ಕಾಟುಪಕ್ಕಂನಲ್ಲಿದ್ದಾಗ ಸವಿತಾ ಆರೋಪಿತನಿಗೆ ಪೋನ್ ಮಾಡುತ್ತಿದ್ದಳು ಮತ್ತು ಆರೋಪಿ ಆ ಫೋನನ್ನು ನನಗೆ ಕೊಡುತ್ತಿದ್ದ ಆಗ ಸವಿತಾ ಇವಳು ನನ್ನ ಅಣ್ಣ ಹೇಗೆ ಹೇಳುತ್ತಾನೋ ಹಾಗೆ ಕೇಳು ಇಲ್ಲವಾದಲ್ಲಿ ಅಲ್ಲಿಯೇ ನಿನ್ನನ್ನು ಸಾಯಿಸುತ್ತಾರೆಂದು ಆಕೆ ನನಗೆ ಹೇಳುತ್ತಿದ್ದಳು. ರೋಜಾ ನನಗೆ ಊಟವನ್ನು ಕೊಡುತ್ತಿರಲಿಲ್ಲ ಮತ್ತು ನನಗೆ ತುಂಬಾ ಹಿಂಸೆ ಮಾಡುತ್ತಿದ್ದಳು. ಅಲ್ಲದೇ ದೂರು ಕೊಟ್ಟ ಬಳಿಕ ಪೊಲೀಸರು ನನ್ನನ್ನು ಆರೋಪಿ ಕರೆದುಕೊಂಡು ಹೋದ ಸ್ಥಳದಲ್ಲಿ ಅಂದರೆ ಹೊಳಲ್ಕೆರೆಯಲ್ಲಿ ಮಹಜರ್ ಮಾಡಿದರು. ಆಗ ಅಭಿಷೇಕ್ ಹಾಗೂ ಇನ್ನೋರ್ವರು ಅವರ ಹೆಸರು ಗೊತ್ತಿಲ್ಲ ಮತ್ತು ಪೋಲೀಸರು ಇದ್ದರು. ನಾನು ಆ ಸ್ಥಳದಲ್ಲಿ ಅವರು ಬರೆದಂತಹ ದಾಖಲೆಗೆ ಸಹಿ ಮಾಡಿದೆ. ಈಗ ಆ ದಾಖಲೆ ನೋಡುತ್ತಿದ್ದು ಅದನ್ನು ನಿಪಿ-**2** ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-**2**(ಎ) ಎಂದು ಗುರುತಿಸಲಾಯಿತು. ಆ ಸ್ಥಳದಲ್ಲಿ ಪೊಲೀಸರು ಪೊಟೋಗಳನ್ನು ತೆಗೆದಿದ್ದಾರೆ. ಅವುಗಳನ್ನು ನೋಡುತ್ತಿದ್ದು ನಿಪಿ-**3** ಮತ್ತು **4** ಎಂದು ಗುರುತಿಸಲಾಯಿತು.

**5.** ಮುಂದೆ ನಾನು ಹೊಳಲ್ಕೆರೆ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯನ್ನು ನೀಡಿದ್ದೇನೆ. ಆರೋಪಿ ಚಿಕ್ಕಮಗಳೂರು ನ್ಯಾಯಾಲಯದಲ್ಲಿ ನನ್ನ ವಿರುದ್ಧ ಹೆಂಡತಿ ಬೇಕು ಎಂದು ಕೇಸು ಹಾಕಿದ್ದ ಆ ಕೇಸಿನಲ್ಲಿ ನಾನು ಹಾಜರಾಗಿದ್ದೆ, ಮುಂದೆ ವಿಚಾರಣೆಯಾಗಿ ಆತನ ಕೇಸು ಸುಳ್ಳು ಎಂದು ನ್ಯಾಯಾಲಯ ತೀರ್ಮಾನ ಮಾಡಿರುತ್ತದೆ. ಮುಂದೆ ನಾನು ಈ ಮೇಲೆ ಹೇಳಿದಂತೆ ತಮಿಳುನಾಡಿಗೆ ಹೊಳಲ್ಕೆರೆಯಿಂದ ಮಹಜರಿಗೆಂದು ಪೊಲೀಸರ ಜೊತೆ ಹೋಗಿದ್ದೆ. ಅಲ್ಲಿ ಅವರಿಗೆ ನಾನು ಆ ಜಾಗವನ್ನು ತೋರಿಸಿದೆ. ಅವರು ಅಲ್ಲಿ ಮಹಜರನ್ನು ಮಾಡಿ ನನ್ನ ಸಹಿಯನ್ನು ಪಡೆದರು. ಆ ಮಹಜರ್ ಕಾಲಕ್ಕೆ ಪುಷ್ಪರಾಜು ಹಾಗೂ ಸುರೇಶ್ ಎಂಬುವವರು ಇದ್ದರು. ಅಲ್ಲಿ ಮಾಡಲಾದ ಮಹಜರನ್ನು ನೋಡುತ್ತಿದ್ದು ಅದನ್ನು ನಿಪಿ-**5** ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-**5**(ಎ) ಎಂದು ಗುರುತಿಸಲಾಯಿತು. ಅಲ್ಲಿಯೂ ಕೂಡಾ ಪೊಲೀಸರು ಪೊಟೋಗಳನ್ನು ತೆಗೆದಿರುತ್ತಾರೆ. ಅವುಗಳನ್ನು ನೋಡುತ್ತಿದ್ದು ನಿಪಿ-**6** ಹಾಗೂ **7** ಎಂದು ಗುರುತಿಸಲಾಯಿತು. ಆ ಮನೆ ಶೀಟಿನ ಮನೆ ಇರುತ್ತದೆ. ಆರೋಪಿ ನನಗೆ ಆ ಮನೆಯ ಕೋಣೆಯಲ್ಲಿ ಅತ್ಯಾಚಾರ ಮಾಡುತ್ತಿದ್ದ.

**6.** ಮುಂದೆ ಆರೋಪಿ ನಾವು ದೂರು ಕೊಟ್ಟಿದ್ದೇವೆ ಎಂಬ ಕಾರಣಕ್ಕಾಗಿ ನಾನು ಒಬ್ಬಳೇ ಮನೆಯಲ್ಲಿದ್ದಾಗ ಕತ್ತಿ ಹಿಡಿದುಕೊಂಡು ಸುಳ್ಳು ದೂರನ್ನು ಕೊಟ್ಟಿದ್ದೀಯ ಅದನ್ನು ವಾಪಸ್ ತೆಗೆದುಕೋ ಎಂದು ಬೆದರಿಸುತ್ತಾ ನನ್ನನ್ನು ಸಾಯಿಸಲು ಬಂದಿದ್ದ. ಆ ವಿಷಯವಾಗಿ ನಾನು ಚಿಕ್ಕಮಗಳೂರಿನಲ್ಲಿ ದೂರು ನೀಡಿದ್ದು ಆ ಬಗ್ಗೆ ಕೂಡಾ ಪ್ರಕರಣ ದಾಖಲಾಗಿರುತ್ತದೆ.

ಚಿಕ್ಕಮಗಳೂರಿನ ನ್ಯಾಯಾಲಯ ನೀಡಿದಂತಹ ತೀರ್ಪು ಹಾಗೂ ಇನ್ನಿತರ ದಾಖಲೆಗಳನ್ನು ಹಾಜರುಪಡಿಸುತ್ತೇನೆ.

ಈ ಹಂತದಲ್ಲಿ ವೇಳೆ ಕೇಳಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು **2** ನೇ ಅವಧಿಗೆ ಮುಂದೂಡಲಾಯಿತು.

(ಇನ್ ಕ್ಯಾಮೆರಾ ಮೂಲಕ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

**<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>**

**7.** ದಿನಾಂಕ **25-08-2022** ರಂದು ಬೆಳಗ್ಗೆ **9.30 - 10.30** ರವರೆಗೆ ಪೊಲೀಸರು ಹೊಳಲ್ಕೆರೆಯಲ್ಲಿ ಮಹಜರ್ ಮಾಡಿರುತ್ತಾರೆ. ಆಗ ಅಭಿಷೇಕನೊಂದಿಗೆ ಧನುಷ್ ಇದ್ದರು. ಕಾಟುಪಕ್ಕಂನಲ್ಲಿ ದಿನಾಂಕ **10-02-2022** ರಂದು ಮದ್ಯಾಹ್ನ **3.00 - 4.00** ರ ಅವಧಿಯಲ್ಲಿ ಮಹಜರ್ ಮಾಡಿರುತ್ತಾರೆ.

ಅಭಿಯೋಜನೆಯು ಕಲಂ **230** ಸಿಆರ್ ಪಿಸಿ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಗೆ ತಕರಾರನ್ನು ಸಲ್ಲಿಸಲು ಶ್ರೀ ಎಸ್.ಎನ್ ವಕೀಲರು ಕಾಲಾವಕಾಶ ಕೋರಿದ್ದು ಕಾರಣ ಅಭಿಯೋಜನೆಯು ಮುಂದುವರೆದ ಮುಖ್ಯ ವಿಚಾರಣೆಗೆ ವೇಳೆ ಕೇಳಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 32/2023

ಪಿಡಬ್ಲ್ಯೂ: 03
ಸಿಡಬ್ಲ್ಯೂ: 03

**ದಿನಾಂಕ: 05-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಅಭಿಷೇಕ್ |
| ತಂದೆಯ ಹೆಸರು | : ರಾಜಪ್ಪ |
| ವಯಸ್ಸು | : 32 ವರ್ಷ |
| ಉದ್ಯೋಗ | : ಆಟೋ ಚಾಲಕ |
| ವಾಸ ಸ್ಥಳ | : ಹೊಳಲ್ಕೆರೆ |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ–**4** / ರಂಜಿತ್ ಕುಮಾರ್ ನನ್ನ ಸ್ನೇಹಿತ. ಪ್ರಾಸಾ–**2** ಇವರನ್ನು ನೋಡಿದ್ದೇನೆ. ಈಗ ನಾಲ್ಕು ಅಥವಾ ನಾಲ್ಕೂವರೆ ವರ್ಷಗಳ ಹಿಂದೆ ಪೊಲೀಸರು ಹೊಳಲ್ಕೆರೆಯ ಖಾಸಗಿ ಬಸ್ ನಿಲ್ದಾಣದ ಬಳಿ ಹೊಸದುರ್ಗ ರಸ್ತೆಯಲ್ಲಿ ಮುಂಜಾನೆ **10.00** ರಿಂದ **11.00** ರವರೆಗೆ ಮಹಜರ್ ಮಾಡಿದರು. ಅಲ್ಲಿ ಪ್ರಾಸಾ–**2** ಕೂಡಾ ಇದ್ದಳು, ಅವಳು ಕಿಡ್ನಾಪ್ ಮಾಡಿದ ಸ್ಥಳ ಎಂದು ಹೇಳಿದಳು. ಪೊಲೀಸರು ಮಹಜರ್ ಮಾಡಿ ನನ್ನ ಸಹಿ ಪಡೆದು ಪೊಟೋ ತೆಗೆದರು. ಸದರಿ ಮಹಜರನ್ನು ನೋಡುತ್ತಿದ್ದು ಅದನ್ನು ನಿಪಿ–**2** ಎಂದು ಈಗಾಗಲೇ ಗುರುತಿಸಲಾಗಿದ್ದು ನನ್ನ ಸಹಿಯನ್ನು ನಿಪಿ–**2**(ಬಿ) ಎಂದು ಗುರುತಿಸಲಾಯಿತು. ಪೊಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ–**3** ಹಾಗೂ **4** ಎಂದು ಈಗಾಗಲೇ ಗುರುತಿಸಲಾಗಿದೆ.

**ಪಾಟೀ ಸವಾಲು:** ಶ್ರೀ ಎಸ್.ಎನ್. ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಾಕ್ಷಿಯ ವೆಚ್ಚವನ್ನು ನೀಡುವ ಷರತ್ತಿನೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

**ಪಾಟೀ ಸವಾಲು:** ಶ್ರೀ ಎಸ್.ಎನ್. ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಾಕ್ಷಿದಾರಳು ತಾನು ಚಿಕ್ಕಮಗಳೂರಿನಿಂದ ಬರುತ್ತಿದ್ದಾಗಿ ತಿಳಿಸಿದ್ದು ಕಾರಣ ಆಕೆಯ ವೆಚ್ಚವನ್ನು ನೀಡುವ ಷರತ್ತಿನೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ಇನ್ ಕ್ಯಾಮೆರಾ ಮೂಲಕ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 32/2023

ಪಿಡಬ್ಲ್ಯೂ: 01
ಸಿಡಬ್ಲ್ಯೂ: 01

**ದಿನಾಂಕಃ 05-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | ಃ ಸವಿತಾ |
| ಗಂಡನ ಹೆಸರು | ಃ ಕಾಶಿ |
| ವಯಸ್ಸು | ಃ 38 ವರ್ಷ |
| ಉದ್ಯೋಗ | ಃ ಕೂಲಿ |
| ವಾಸ ಸ್ಥಳ | ಃ ಗಾಳಿಪೂಜೆ, ಜಾಗರ ಹೋಬಳಿ, ಚಿಕ್ಕಮಗಳೂರು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ–**2** ನನ್ನ ಮಗಳು. ಈಗ **4** ವರ್ಷಗಳ ಹಿಂದೆ ಆಕೆಯನ್ನು ನನ್ನ ತಮ್ಮನಿಗೆ ಮದುವೆ ಮಾಡಿ ಹೊಳಲ್ಕೆರೆಗೆ ಕೊಟ್ಟಿದ್ದೆ. ಮದುವೆಯಾದ ನಂತರ ಆಕೆ ತನ್ನ ಗಂಡನೊಂದಿಗೆ ಹೊಳಲ್ಕೆರೆಯಲ್ಲೇ ಇದ್ದಳು. ಈಗ **4** ವರ್ಷದ ಹಿಂದೆ ನನ್ನ ತಮ್ಮ ಪೋನ್ ಮಾಡಿ ನನ್ನ ಮಗಳು ಅಂದರೆ ಆತನ ಹೆಂಡತಿ ಕಾಣೆಯಾಗಿದ್ದಾಳೆಂದು ನನಗೆ ತಿಳಿಸಿದ. ಆಗ ನಾವು ಮತ್ತು ಪೊಲೀಸರು ಆಕೆಯನ್ನು ಹುಡುಕಾಡುತ್ತಿದ್ದೆವು. ಮುಂದೆ **3** ತಿಂಗಳ ನಂತರ ಆಕೆ ನಮ್ಮ ಮನೆಗೆ ಬಂದಳು. ಅದಕ್ಕೂ ಮೊದಲೇ ನನ್ನ ಅಳಿಯ ಆಕೆಯನ್ನು ಹುಡುಕಾಡಿ ಆಕೆ ಸಿಗದೇ ಇದ್ದ ಕಾರಣ ಕಾಣೆಯಾಗಿದ್ದ ಬಗ್ಗೆ ದೂರನ್ನು ನೀಡಿದ್ದ. ಆಕೆ ಬಂದ ನಂತರ ಅವಳು ಮಂಕಾಗಿ ಕೂಡುತ್ತಿದ್ದಳು. ಆಗ ನಾನು ಆಕೆಗೆ ನಿನ್ನನ್ನು ಕರೆದುಕೊಂಡು ಹೋಗಿ ಗಂಡನ ಮನೆಗೆ ಬಿಡುತ್ತೇವೆ ಎಂದು ಹೇಳಿದೆ. ಆಕೆ ಒಮ್ಮೆಲೇ ಜೋರಾಗಿ ಅಳಲು ಶುರುಮಾಡಿದಳು. ಆಗ ಏನಾಗಿದೆ ಎಂದು ನಾನು ಆಕೆಗೆ ಕೇಳಲಾಗಿ ಆಕೆ ತಾನು ಮಾರುಕಟ್ಟೆಗೆ ತರಕಾರಿ ತರಲೆಂದು ಹೊಳಲ್ಕೆರೆಯಲ್ಲಿ ಹೋಗಿದ್ದಾಗಿ ಆಗ ತನ್ನ ತಂಗಿಯ ಸ್ನೇಹಿತೆಯ ಹುಟ್ಟುಹಬ್ಬ ಇದೆ ಎಂದು ಹೇಳಿ ಆರೋಪಿ ಆಕೆಯನ್ನು ಕಾರಿನಲ್ಲಿ ಕರೆದುಕೊಂಡು ಹೋಗಿದ್ದಾಗಿ ಹೇಳಿದಳು. ಆಗ ಸಾಯಂಕಾಲವಾಗಿತ್ತೆಂದು ತಿಳಿಸಿದಳು. ಮುಂದೆ ಆರೋಪಿ ಆಕೆಯನ್ನು ಕರೆದುಕೊಂಡು ಹೋಗುವಾಗ ಎಲ್ಲಿಗೆ ಕರೆದುಕೊಂಡು ಹೋಗುತ್ತಿದ್ದಿಯಾ ಎಂದು ಕೇಳಿದಾಗ ಸುಮ್ಮನೇ ಇರಬೇಕು ಗಲಾಟೆ ಮಾಡಕೂಡದು ಎಂದು ಇಲ್ಲವಾದರೆ ಚಾಕು ಹಾಕುವುದಾಗಿ ಆರೋಪಿ ಅವಳಿಗೆ ಬೆದರಿಸಿದ ಬಗ್ಗೆ ಹಾಗೂ ತಮಿಳುನಾಡಿನ ಕಾಟುಪಕ್ಕಂ ಗ್ರಾಮಕ್ಕೆ ಆಕೆಯನ್ನು ಕರೆದುಕೊಂಡು ಹೋಗಿದ್ದಾಗಿ ಮತ್ತು ಅಲ್ಲಿ ರೋಜಾ ಎಂಬುವವರ ಮನೆಯಲ್ಲಿ ತನಗೆ ಆರೋಪಿ ಅತ್ಯಾಚಾರ ಮಾಡಿದ್ದಾಗಿ ಹಾಗೂ ಆರೋಪಿತನ ತಂಗಿ ಸವಿತಾ ಹಾಗೂ ಆತನ ಸಂಬಂಧಿ ರೋಜಾ ಇವರುಗಳು ಆಕೆಯ ಸರ, ಉಂಗುರ, ಚೈನು, ತಾಳಿ ಇವುಗಳನ್ನು ಕಿತ್ತುಕೊಂಡರು ಎಂದು ತಿಳಿಸಿದಳು. ಆರೋಪಿಗೆ ಆಕೆ ನನ್ನನ್ನು ಕರೆದುಕೊಂಡು ಹೋಗಿ ನನ್ನ

ಗಂಡನ ಮನೆಗೆ ಬಿಡು ಎಂದು ಕೇಳಿದ್ದಾಗ್ಯೂ ಆತ ತನ್ನನ್ನು ಬಿಡಲಿಲ್ಲವೆಂದು ಮತ್ತು ದಿನವೂ ಅತ್ಯಾಚಾರ ಮಾಡಿದ್ದಾಗಿ ಹೇಳಿದಳು. ಆ ವಿಷಯ ತಿಳಿದು ನಾನು ಅವಳನ್ನು ಹೊಳಲ್ಕೆರೆ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ದೂರನ್ನು ಕೊಟ್ಟೆ. ನಾನು ನೀಡಿದ ದೂರನ್ನು ನೋಡುತ್ತಿದ್ದು ಅದನ್ನು ನಿಪಿ–**1** ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ–**1**(ಎ) ಎಂದು ಗುರುತಿಸಲಾಯಿತು. ಆರೋಪಿ ಆಕೆಯನ್ನು ಕಾಟುಪಕ್ಕಂಗೆ ಕರೆದುಕೊಂಡು ಹೋಗುವ ಮೊದಲು ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದ ಎಂದು ತಿಳಿಸಿದಳು.

**ಪಾಟೀ ಸವಾಲು:** ಶ್ರೀ ಎಸ್.ಎನ್. ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಾಕ್ಷಿದಾರಳು ತಾನು ಚಿಕ್ಕಮಗಳೂರಿನಿಂದ ಬರುತ್ತಿದ್ದಾಗಿ ತಿಳಿಸಿದ್ದು ಕಾರಣ ಆಕೆಯ ವೆಚ್ಚವನ್ನು ನೀಡುವ ಷರತ್ತಿನೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ಇನ್ ಕ್ಯಾಮೆರಾ ಮೂಲಕ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.